Misc. ನಂಬರಃ 04/2024

ಪಿ. ಡಬ್ಲ್ಯೂಃ 1

ದಿಃ 27-02-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಎ.ಎನ್.ಟಿ ಇವರಿಂದಃ

ನಾನು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿದ್ದು, ಸದರಿ ದಿ02-06-2022 ರಿಂದ 02-09-2022 ಚಿಕಿತ್ಸೆ ಪಡೆದಿರುತ್ತೇನೆ. ನಂತರ ನನಗೆ ವಾಸಿಯಾಗಿರುತ್ತದೆ. ಸಾಕ್ಷಿಯು ಸ್ವಲ್ಪ ವಾಸಿಯಾಗಿರುತ್ತದೆ ಹಾಗೂ ಓಡಾಡಲು ಆಗುತ್ತಿರಲಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಸುಮಾರು 6 ತಿಂಗಳ ಕಾಲ ನನಗೆ ಓಡಾಡಲು ಆಗಿರುವುದಿಲ್ಲ. ಈ ಪ್ರಕರಣ ನಡೆಯುತ್ತಿದ್ದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ನಮ್ಮ ಮನೆಯವರು ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದಾಗ ಬಂದು ವಕೀಲರನ್ನು ಭೇಟಿಯಾಗುತ್ತಿದ್ದರು. ಈ ಪ್ರಕರಣ ದಿಃ04-09-2024 ರಂದು ದಾಖಲು ಮಾಡಲಾಗಿರುತ್ತದೆ. ಈ ಪ್ರಕರಣವನ್ನು ದಾಖಲು ಮಾಡಲು ವಿಳಂಬವಾದ ಬಗ್ಗೆ ಅದನ್ನು ಮನ್ನಿಸಲು ಯಾವುದೇ ಅರ್ಜಿ ಅಥವಾ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಪೂರಕವಾಗುವ ರೀತಿಯಲ್ಲಿ ಸುಳ್ಳು ಅರ್ಜಿಯನ್ನು ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ವಿಳಂಬವಾಗಿ ಸಲ್ಲಿಸಿದ್ದು, ಅದನ್ನು ಮನ್ನಿಸಲು ಯಾವುದೇ ಅರ್ಜಿ

ಸಲ್ಲಿಸದೇ ಇರುವುದರಿಂದ ನಿಮ್ಮ ಅರ್ಜಿಯು ವಜಾ ಮಾಡಲು ಅರ್ಹವಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.